(ii) *re ; Non-recovery of transportation charges from the Gadag Co-operative Textile Mills Ltd: Hulkoti.*

SRI J. L. KABADI (Ballolli):—I call the attention of the Minister for Agriculture to the loss due to non recovery of transportation charges from the Gadag Co-operative Textile Mills, Hulkoti.

SRI N. CHIKKE GOWDA (Minister for Agriculture):— I wish to make the following statement.

In the year 1973 the Karnataka Agro Industries Corporation transported 38 steel trusses fabricated at the Corporation's workshop to Hulkoti by charging at Rs. 80 per truss. This matter had been examined by the Mysore Legislature Committee on Public Undertakings in 1973 itself. While the Corporation has claimed Rs. 4,320 for the work, the Committee on Public Undertakings had stated that charges should have been levied on the basis of volume of the material transported as is done by other transport contractors. Hence the Committee had concluded that the Corporation had lost a revenue of Rs. 11,305. The Committee had also stated that the vehicles of the Corporation are meant for their own use and not for hiring to outsiders generally and if at all they were to be hired out it should have been done at rates favourable to the Corporation and not at the special rates worked out in favour of the customer. This matter has been noted by the Corporation for future guidance.

Actual cost of Transport of Trusses to the Hulkoti.

I. Oils and Lubricants :

(*a*) Total H.S D. Consumed for the transportation of Trusses 2450 litresat Rs. 0-91 paise per litre $2450 \times 0\text{-}91 = 2,229\text{-}30$.

(*b*) Total S.A.E. Oil consumed for the transportation of trusses: 35 litres at Rs. 1-50 per litre $35 \times 1\text{-}50 = 52,50$.

Total: a+b = 2,282-00

Total 'A' ... 2,282-00

II. Pay and Allowance:

15 days salary of the driver: (120-250)	$\frac{311\text{-}20}{2}$	= 155-60
15 days salary of the helper: (70-120)	$\frac{217\text{-}02}{2}$	= 108-50
15 days T.A. of the Driver at 8 per day	15×8	= 120-00

15 days C.A. of the Helper at Rs. 8 per day	15×8	= 120-00
	Total 'B'	Rs. 504-10
III. Depreciation of the machinery for running 4200 K.M. (Approximate)		Rs. 210-00
Total A+B+C = 2,996-10		
	Total 'C'	Rs. 2,996-10

Actual amount received from Gadag Co-operative Textile Mills. = Rs. 4,320-00
Less Expenditure: = Rs. 2,996-10

Rs. 1,323-90

ಶ್ರೀ ಜೆ. ಎಲ್. ಕಬಾಡಿ.—ಸದರಿ ಟ್ರಸರ್ ಎಷ್ಟು ಟನ್ನಿನ ಭಾರವಾಗಿದ್ದಿತು? ಪ್ರತಿ ಟ್ರಿಪ್ಪಿಗೆ ೮೦ ರೂಪಾಯಿ ಚಾರ್ಜ್ ಮಾಡಲಿಕ್ಕೆ ಕಾರಣವೇನು ? ಆಧಾರವೇನು ? ಇದರಿಂದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ನಷ್ಟವಾಗಿದ್ದು, ಅದನ್ನು ರಿಕವರಿ ಮಾಡಬೇಕೆಂದು ಸಾರ್ವಜನಿಕ ಉದ್ದಿಮೆ ಸಮಿತಿಯು ವರು ತಿಳಿಸಿದ್ದರೂ, ಅದಕ್ಕೆ ಪೂರ್ವಭಾವಿಯಾಗಿ ಇವರಿಗೆ ಇಷ್ಟು ಸವಲತ್ತುಗಳನ್ನೂ ಮತ್ತು ರಿಯಾಯಿತಿ ಗಳನ್ನು ಕೊಡಲು ಕಾರಣವೇನು ?

ಅಧ್ಯಕ್ಷರು.—ಕ್ವಶ್ಚೀನ್ ಕೇಳಿ, ಭಾಷಣ ಮಾಡಿದರೆ ಹೇಗೆ?

ಶ್ರೀ ಜೆ. ಎಲ್. ಕಬಾಡಿ.—ಪ್ರತಿಯೊಂದು ಕಿಲೋ ಮೀಟರ್‌ಗೂ ರೂ. ೬.೨೦ ಕೊಡಬೇಕೆಂದು ನಿಯಮವಿದೆ, ಹಾಗಿದ್ದರೂ ಕನ್ಸಿಷನ್ ರೇಟ್ ಕೊಡುವುದಕ್ಕೆ ಕಾರಣವೇನು ? ಎಸ್.ಎ.ಇ. ಆಯಿಲ್‌ಗೆ ಲೀಟರ್‌ಗೆ ೧-೫೦ ರೂಪಾಯಿನಂತೆ ಕೊಟ್ಟಿದ್ದಾಗ್ಯೂ ಲುಕ್ಸಾನು ಆಗುವುದಕ್ಕೆ ಕಾರ್ಪೊರೇಷನ್ ಕಾರಣ ವಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸಭಾಧ್ಯಕ್ಷಣೀಯವರೇ, ಈ ವಿಚಾರದಲ್ಲಿ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಸಹ ಚರ್ಚೆಯಾಗಿದೆ. ಪಿ.ಎ.ಸಿ. ರಿಪೋರ್ಟ್‌ನ ಬಗ್ಗೆ ಕೂಡ ಚರ್ಚೆಯಾಗಿದೆ. ಒಂದು ವಿಷಯ ಜ್ಞಾಪಕಕ್ಕೆ ತರುತ್ತಿದ್ದೇನೆ. ಹುಲಕೋಟಿ ಸೊಸೈಟಿ ಏನಿದೆ ಅದು ಅಗ್ರೋ ಬೇಸ್ಡ್ ಇಂಡಸ್ಟ್ರೀ ಮತ್ತು ಅದರಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರ ೧೫ ಲಕ್ಷ ರೂಪಾಯಿಗಳ ಶೇರ್ ಬಂಡವಾಳ ಅದರಲ್ಲಿ ಇದೆ, ಇದರ ಜೊತೆಗೆ ಅದು ಅಗ್ರೋ ಬೇಸ್ಡ್ ಇಂಡಸ್ಟ್ರೀಸ್ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದರು ರೂ. ೬-೨೫ಗಳ ಹಾಗೆ ಚಾರ್ಜ್ ಮಾಡಬೇಕಾಗಿತ್ತು ಎಂದು, ಈ ಪೈಮ್ ಮೂವರ್ ಯಂತ್ರ ಇದು ಸುಮಾರು ೨೦ ಟನ್ ಕೆಪಾಸಿಟಿ ಹಿಡಿಯತಕ್ಕಂಥದ್ದು, ಇದನ್ನು ಉಪಯೋಗಿಸ ತಕ್ಕಂಥದ್ದು. ಸಾಮಾನ್ಯವಾಗಿ ಬುಲ್ಡೋಜರ್‌ಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಸಾಗಿಸುವುದಕ್ಕೆ ಈ ಪೈಮ್ ಮೂವರ್‌ನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಇದನ್ನು ಉಪಯೋಗಿಸುವುದಿಲ್ಲ. ಆದರೆ ಈ ಟ್ರೈಸರ್‌ಗಳು ಉದ್ದ ಆಗಲವಾಗಿದ್ದುದರಿಂದ ಇದನ್ನು ಉಪಯೋಗಿಸಿ ೪-೫ ಸಾರಿ ಓಡಾಡಿಸ ಲಾಗಿದೆ. ಅದಕ್ಕೆ ಆಕ್ಚುವಲ್ ಕಾಸ್ಟ್ ಏನಾಗಿದೆ ಅದನ್ನು ಕೊಡಲಾಗಿದೆ. ಅದರ ಬಗ್ಗೆ ಪಿ.ಎ.ಸಿ. ಕಮಿಟಿಯವರೂ ಕೂಡ ಗಮನಿಸಿದ್ದಾರೆ.

ಶ್ರೀ ಜೆ ಎಲ್. ಕಬಾಡಿ.—ತಾವು ಕನ್ಸಿಷನ್ ಕೊಟ್ಟಿದ್ದಾಗ್ಯೂ ಕೂಡ ಈ ಕಾರ್ಪೊರೇಷನ್ನಿನಿಂದ ಲುಕ್ಸಾನು ಏನು ಆಗಿದೆ ಅದನ್ನು ಪಸೂಲು ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.—ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ವಸೂಲು ಮಾಡಿರ ತಕ್ಕಂಥದ್ದು ೪,೩೨೦ ರೂಪಾಯಿಗಳು ಪ್ರತಿಯೊಂದು ಟ್ರಸಸ್‌ಗಳಿಗೂ ೮೦ ರೂಪಾಯಿಗಳಂತೆ ಲೆಕ್ಕ ಹಾಕಿ, ಅದು ಅಗ್ರೋ ಬೇಸ್ಡ್ ಇಂಡಸ್ಟ್ರೀ ಆಗಿರುವುದರಿಂದ ಹಾಗೂ ಅಲ್ಲಿ ಸರ್ಕಾರದ ಪೇರು ಬಂಡವಾಳ ವಿರುವುದರಿಂದ ನಾರ್ಮಲ್ ರೇಟನ್ನೇ ಹಾಕಲಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷಣಿಯವರೇ, ನಾನು ಕಳೆದ ವರ್ಷ ಅಂದರೆ ೧೯೭೬ನೇ ಇಸ್ವಿ ಫೆಬ್ರುವರಿಯಲ್ಲಿ ಪ್ರಶ್ನೆಗಳನ್ನು ಕಳುಹಿಸಿದ್ದೆ, ಆಮೇಲೆ ನವೆಂಬರ್‌ನಲ್ಲಿಯೂ ರಿನ್ಯೂ ಮಾಡಿದ್ದೇನೆ, ಆದರೆ ಇಲ್ಲಿಯವರೆಗೆ ಅದಕ್ಕೆ ಸರ್ಕಾರದಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು.—ರಿನ್ಯೂ ಮಾಡಿಸಿದ್ದೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ನನ್ನ ೧೦ ಪ್ರಶ್ನೆಗಳಲ್ಲಿ ೮-೯ ಪ್ರಶ್ನೆಗಳು ಹಾಗೆಯೇ ಉಳಿದಿವೆ ಈ ಸದನ ಮುಂಗಿಯುತ್ತಾ ಬಂತು, ಸಭೆಯ ಅಯಸ್ಸು ಮುಗಿಯುತ್ತಾ ಬಂದಿದೆ ಆದರೆ ನನ್ನ ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ, ಅದಕ್ಕೆ ನಾವು ಏನು ಮಾಡಬೇಕು ಎಂಬುದೇ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ನೋಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಹತ್ತಾರು ಸಲ ನೋಟೀಸ್ ಕೊಟ್ಟಿದ್ದೇನೆ ಉತ್ತರ ಕೊಡಿ ಎಂದು ಆದರೆ ಸರ್ಕಾರ ಗಜಗಮನ ನೀತಿಯನ್ನು ಅನುಸರಿಸುತ್ತಾ ಜೀವಂತ ಸಾವಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಸರ್ಕಾರದ ಪರವಿಯಿಂದ ಉತ್ತರವನ್ನು ಕೊಡಬೇಕಾಗುತ್ತದೆ, ಅದಕ್ಕೆ ನಾನು ಹೇಳುತ್ತಿದ್ದೇನೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರ ಬಗ್ಗೆ ಆದಷ್ಟು ಜಾಗ್ರತೆ ಉತ್ತರ ತರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೆಂಕಟಲಿಂಗಯ್ಯ —ಮಾನ್ಯ ಅಧ್ಯಕ್ಷಣಿಯವರೇ, ಮೈಸೂರಿನಲ್ಲಿರುವ ಕೆ.ಆರ್. ಮಿಲ್ಸ್ ನಲ್ಲಿ ಮಂಷ್ಯರ ನಡೆಯುತ್ತಿರುವುದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ ಅಲ್ಲಿ ಮೂರು ವರೆ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ಒಟ್ಟು, ಅವರ ಡಿಪೆಂಡೆಂಟ್ಸ್ ಎಲ್ಲಾ ಸೇರಿ ಸುಮಾರು ೧೫ ಸಾವಿರ ಜನವಾಗುತ್ತದೆ, ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದ್ದರೂ ಇನ್ನೂವರೆಗೆ ಸರ್ಕಾರದಿಂದ ಉತ್ತರ ಬಂದಿಲ್ಲ.

ಅಧ್ಯಕ್ಷರು.—ದಿವಸಕ್ಕೆ ೩-೪ ಕಾಲಿಂಗ್ ಅಟೆನ್‌ಷನ್ ಹಾಕುತ್ತಿದ್ದೇವೆ, ಸರ್ಕಾರ ಉತ್ತರ ಕಳುಹಿಸಿದ ತಕ್ಷಣವೇ ಹಾಕುತ್ತೇವೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷಣಿಯವರೇ ಈ ಸಂಬಂಧ ಇಲಾಖೆಯ ಬೇಡಿಕೆಯು ನಮ್ಮ ಮುಂದಿದೆಯಲ್ಲವೇ ?

ಅಧ್ಯಕ್ಷರು.—ಅಲ್ಲವೇ

ಶ್ರೀ ಸಿ. ಬೈರೇಗೌಡ.—ಈ ಬೇಡಿಕೆ ಸಭೆಯ ಮುಂದೆ ಬರುತ್ತದೆಂದು ನಮ್ಮೆಲ್ಲರಿಗೂ ಗೊತ್ತಿದೆ, ಇವತು ನಮಗೆ ಏನು ಒಂದು ಅನುಮಾನ ಬಂದಿದೆ ಅದನ್ನು ಸ್ಪಷ್ಟಪಡಿಸಬೇಕಾಗಿದೆ.